International Journal of Kannada Research
www.kannadajournal.com

ISSN: 2454–5813
IJKR 2019; 5(4): 64-68
© 2019 IJKR
www.kannadajournal.com
Received: 01-08-2019
Accepted: 03-09-2019

**Jagadeesha M**
Research Scholar, Dept. of Sociology, Tumkur University, Tumkur, Karnataka, India

**Dr. Nagaraja S**
Research Guide, Dept. of Sociology Tumkur, University, Tumkur, Karnataka, India

**Corresponding Author:**
**Jagadeesha M**
Research Scholar, Dept. of Sociology, Tumkur University, Tumkur, Karnataka, India

# 33 ಗ್ರಾಮಗಳ ವೃಕ್ಷದೇವತೆ : ಆಲದಕೊಂಬೆ ಅಮ್ಮ ತುಮಕೂರು ಜಿಲ್ಲೆಯ ಗುಬ್ಬಿ–ತಾಲ್ಲೋಕ್ – ಜಿ.ಹೊಸಹಳ್ಳಿ

**Jagadeesha M and Dr. Nagaraja S**

ನಮ್ಮ ನಾಡಿನ ಪ್ರತಿಯೊಂದು ಗ್ರಾಮ, ಪಟ್ಟಣ, ನಗರಗಳಾಗಲೀ ಶಿಷ್ಠದೇವತೆಗಳ ಜೊತೆಗೆ ತನ್ನದೇ ಆದ ಗ್ರಾಮದೇವತೆಗಳನ್ನು ಹೊಂದಿರುತ್ತವೆ. ಶಿಷ್ಠ ದೇವತೆಗಳು ಸಾಮಾನ್ಯವಾಗಿ ಊರಿನ ಒಳಭಾಗದಲ್ಲಿದ್ದರೆ ಗ್ರಾಮದೇವತೆಗಳು ಮಾತ್ರ ಆ ಊರಿನ ಹೆಬ್ಬಾಗಿಲಿನಲ್ಲೋ ಅಥವಾ ಊರಿನ ಹೊರವಲಯದಲ್ಲೋ ಇರುತ್ತವೆ. ಈ ದೇವತೆಗಳು ಉಗ್ರ ಹೆಬ್ಬಾಗಿಲಿನಲ್ಲೋ ಅಥವಾ ಊರಿನ ಹೊರವಲಯದಲ್ಲೋ ಇರುತ್ತವೆ. ಈ ದೇವತೆಗಳು ಉಗ್ರ ಸ್ವರೂಪದಲ್ಲಿದ್ದು ಆ ಗ್ರಾಮದೊಳಕ್ಕೆ ಬರುವ ದುಷ್ಟಶಕ್ತಿಗಳನ್ನು ರೋಗರುಜಿನಗಳನ್ನು ತಡಯುತ್ತವೆ ಎಂಬ ಬಲವಾದ ನಂಬಿಕೆ ಆ ಗ್ರಾಮದವರಿಗೆ ಇದೆ. ಈ ಕಲ್ಪನೆ ಬಹಳ ಪುರಾತನವಾದುದು. ಇದು ಮಾನವನಷ್ಟೇ ಹಳೆಯದು. ಸಿಂಧೂ ನದಿಯ ನಾಗರೀಕತೆಯ ಕಾಲದಲ್ಲಿಯೂ ಕೂಡಾ ಇಂತಹ ಕಲ್ಪನೆ ಇದ್ದು, ಅಲ್ಲಿ ಕಾಳಿ, ಕರಾಳಿ, ಅಂಬಾ ಮುಂತಾದ ದೇವತೆಗಳನ್ನು ಆರಾಧಿಸುತ್ತಿದ್ದರೆಂದು ಹೇಳಲಾಗಿದೆ. ಇಂತಹ ದೇವತೆಗಳನ್ನು ಮಣ್ಣು, ಮರ ಅಥವಾ ಕಲ್ಲಿನ ಪ್ರತಿಮೆಗಳನ್ನು ಮಾಡಿಕೊಂಡು ಪೂಜಿಸುವ ಪದ್ಧತಿಗೆ ಹಲವಾರು ಶತಮಾನಗಳ ಚಾರಿತ್ರಿಕ ಹಿನ್ನೆಲೆ ಇದೆ. ಆರಂಭದಲ್ಲಿ ಅಲೆಮಾರಿ ಜೀವನ ನಡೆಸುತ್ತಿದ್ದ ಮಾನವ ಒಂದೆಡೆ ನೆಲೆ ನಿಂತು ಕ್ರಮೇಣ ಆ ಸ್ಥಳವೇ ಗ್ರಾಮವಾಗಿ ರೂಪುಗೊಂಡ ನಂತರ ಗ್ರಾಮದೇವತೆಯು ಸೃಷ್ಟಿಯಾಯಿತೆಂದು ಹೇಳಬಹುದು. ಅವನು ತನ್ನನ್ನು ತಾನು ರಕ್ಷಿಸಿಕೊಳ್ಳಲು ತಾನೇ ಸೃಷ್ಟಿಸಿಕೊಂಡ ಕಲ್ಪನೆ ಎನ್ನಬಹುದು. ಇದಕ್ಕೆ ಪ್ರಮುಖ ಕಾರಣ ಆತನಲ್ಲಿದ್ದ ಭಯ. ಇದನ್ನು ಹಿನ್ನೆಲೆಯಾಗಿಟ್ಟುಕೊಂಡು ನೋಡಿದರೆ ಗುಬ್ಬಿಹೊಸಳ್ಳಿಯಲ್ಲಿ ನೆಲೆ ನಿಂತಿರುವ ಗ್ರಾಮದೇವತೆ ಅಲದಕೊಂಬೆ ಅಮ್ಮನ ಕಲ್ಪನೆಯು ಹೊರತಾಗಿಲ್ಲ.

## ಐತಿಹಾಸಿಕ ಹಿನ್ನೆಲೆ

ಆಲದಕೊಂಬೆ ಅಮ್ಮ ವಿಶಿಷ್ಠವಾದ ಪರಿಕಲ್ಪನೆಯನ್ನು ಹೊಂದಿದೆ. ಪ್ರತಿಯೊಂದು ಗ್ರಾಮದೇವತೆಯೂ ತಾನು ನೆಲೆ ನಿಂತ ಗ್ರಾಮಕ್ಕೆ ಸೀಮಿತವಾಗಿದ್ದರೆ, ಈ ದೇವತೆ ಗುಬ್ಬಿಹೊಸಳ್ಳಿ ಸಂಸ್ಥಾನಕ್ಕೆ ಸೇರಿದ್ದ 33 ಗ್ರಾಮಗಳ 18 ಕೋಮಿನ ಜನಾಂಗದವರಿಗೆ ಅರಾಧ್ಯದೇವತೆಯಾಗಿದ್ದಾಳೆ. ಆದ್ದರಿಂದ ಇದು "ಸಂಸ್ಥಾನದ ದೇವತೆ" ಎಂದೇ ಹೇಳಬಹುದು. ಇಂದು ಪ್ರಜಾಪ್ರಭುತ್ವದಲ್ಲಿ ರಾಜರು, ಸಂಸ್ಥಾಪಕರು ಇಲ್ಲದಿದ್ದರೂ ಅವುಗಳಿದ್ದ ಕಾಲದಲ್ಲಿ ಆರಂಭಿಸಿದ ಪದ್ಧತಿ, ಸಂಪ್ರದಾಯಗಳು ಈಗಲೂ ಅಲ್ಲಿ ಮುಂದುವರಿದಿರುವುದನ್ನು ನೋಡಿದಾಗ ವಾಸ್ತವವಾಗಿ ಇದು ಒಂದು ಗ್ರಾಮದ ದೇವತೆಯಾಗದೆ 33 ಗ್ರಾಮಗಳಿಗೂ ಮುಖ್ಯ ದೇವತೆಯಾಗಿದೆ ಎನ್ನಬಹುದು. ಈ ದೇವತೆಯ ಪರಿಕಲ್ಪನೆ ಯಾವಾಗ, ಏಕೆ ಆರಂಭವಾಯಿತು ಎಂಬುದನ್ನು ಪರಿಶೀಲಿಸಿದರೆ ಅಲ್ಲಿನ ಜನತೆ ಆ ದೇವತೆಯ ಬಗ್ಗೆ ಇರುವ ಕಥೆಯನ್ನು ಹೇಳುವರು ಅದನ್ನು ಹೀಗೆ ಸಂಗ್ರಹಿಸಬಹುದು.

"ಪ್ರಭುವನ ಹಳ್ಳಿ ರೈತ ಕುಟುಂಬದ ಹೆಣ್ಣು ಮಗಳನ್ನು ಗುಬ್ಬಿಹೊಸಳ್ಳಿ ರೈತ ಕುಟುಂಬದ ವ್ಯಕ್ತಿಯೋರ್ವನೂ ವಿವಾಹ ಮಾಡಿಕೊಡಲಾಗಿತ್ತು. ಆ ಕುಟುಂಬದಲ್ಲಿ ಏಳು ಜನ ಸೋದರರು ಇದ್ದರು. ಹೀಗೆ ಆ ಮನೆಗೆ ಸೊಸೆಯಾಗಿ ಬಂದ ಆ ಹೆಣ್ಣು ದಿನನಿತ್ಯ ಗೃಹಿಣಿ ಮಾಡುವ ಎಲ್ಲ ಕೆಲಸಗಳನ್ನು ಮಾಡುತ್ತಾ ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿದ್ದಳು. ಒಂದು ದಿನ ಆಕೆಯ ಗಂಡ ಮತ್ತು ಮೈದುನರು ಕೃಷಿಕೆಲಸ ಮಾಡಲು ತನ್ನ ಊರಿಗೆ ಸಮೀಪದಲ್ಲಿದ್ದ ಬಾರೆಯ ಹೊಲಕ್ಕೆ ಹೋಗಿದ್ದರು. ಅವಳು ಅವರಿಗೆ ಅಡುಗೆ ಮಾಡಿಕೊಂಡು ಅವರು ಹೋಗಿದ್ದ ಹೊಲಕ್ಕೆ ತೆಗೆದುಕೊಂಡು ಹೋಗಿದ್ದರು.

ಅವಳು ಅವರಿಗೆ ಅಡುಗೆ ಮಾಡಿಕೊಂಡು ಅವರು ಹೋಗಿದ್ದ ಹೊಲಕ್ಕೆ ತೆಗೆದುಕೊಂಡು ಹೋಗುವುದು ತಡವಾಯಿತು. ಆ ವೇಳೆಗಾಗಲೇ ಗಂಡ ಮತ್ತೊಮ್ಮೆ ......... ಹಸಿವಿನಿಂದ ಚಡಪಡಿಸುತ್ತಿದ್ದರು. ಬುತ್ತಿ ತೆಗೆದುಕೊಂಡು ಹೊಲಕ್ಕೆ ಬಂದ ಆ ಹೆಣ್ಣು ಮಗಳು ಅದನ್ನು ಇಳಿಸಿಕೊಳ್ಳಲು ತನ್ನ ಗಂಡ ಮತ್ತು ಮೈದುನರನ್ನು ಕೂಗಿ ಕರೆದಳು. ತಡವಾಗಿದ್ದಕ್ಕೆ ಕೋಪಗೊಂಡಿದ್ದ ಅವರು ಅವಳ ಕೂಗಿಗೆ ಮಾನ್ಯತೆ ನೀಡದೆ ಕೆಲಸದಲ್ಲಿ ಮಗ್ನರಾದರು. ಇದರಿಂದ ನೊಂದ ಆ ಹೆಣ್ಣು ಮಗಳು ಬಾರೆಯ ಕಣದ ಮಧ್ಯದಲ್ಲಿದ್ದ ಮೇಟಿಯ ಮೇಲಿಟ್ಟು ನಿಧಾನವಾಗಿ ಅದನ್ನು ಕೆಳಗಿಳಿಸಿದಳು. ಪುನಃ ಅವಳು ಅವರನ್ನು ಊಟಕ್ಕೆ ಕರೆದರೂ ಬಾರದಿದ್ದಾಗ ಅವಳಿಗೆ ಕೋಪ ಬಂದು "ತಾನು ಧರ್ಮನಿಷ್ಠೆಳು ಸಚ್ಚಾಂತ್ರಳೂ ಪತಿಪ್ರತೆಯೂ ಆಗಿದ್ದರೆ ಮೇಟಿಯು ಇಬ್ಬಾಗವಾಗಿ ಭೂ ತಾಯಿ ತನ್ನನ್ನು ಸ್ವೀಕರಿಸಲಿ ಎಂದು ದೇವರನ್ನು ಪ್ರಾರ್ಥಿಸಿದಳು. ಅವಳ ಕೋರಿಕೆಗೆ ದೇವರು ಮೆಚ್ಚಿ ಮೇಲಟಿ ಇಬ್ಭಾಗವಾಗಿ ಭೂ ತಾಯಿ ತನ್ನನ್ನು ಸ್ವೀಕರಿಸಲಿ ಎಂದು ದೇವರನ್ನು ಪ್ರಾರ್ಥಿಸಿದಳು. ಅವಳ ಕೋರಿಕೆಗೆ ದೇವರು ಮೆಚ್ಚಿ ಮೇಟಿ ಇಬ್ಭಾಗವಾಯಿತು. ಅವಳು ಅದರೊಳಗೆ ಪ್ರವೇಶ ಮಾಡಿದಳು. ಕ್ರಮೇಣ ಆ ಮೇಟಿ ಚಿಗುರಿ ಅದು ಆಲದಮರವಾಗಿ ಬೆಳೆಯಿತು. ಇದನ್ನು ಕಂಡು ಮೂಕವಿಸ್ಮಿತರಾದ ಆಕೆಯು ಗಂಡ ಮತ್ತು ಮೈದುನರು ಅವರು ಅದನ್ನು ಪೂಜಿಸಲಾರಂಭಿಸಿದರು. ಈ ಸುದ್ದಿ ಆ ಪ್ರದೇಶದಲ್ಲೆಲ್ಲಾ ಹಬ್ಬಿತು. ಜನರೆಲ್ಲಾ ಬಂದು ಆಲದಮರದ ಕೂಟದಲ್ಲಿದ್ದು ಆ ಸಾಧ್ವಿಮಣಿಯನ್ನು ಪೂಜಿಸತೊಡಗಿದರು. ಅವಳೇ ಆಲದ ಕೊಂಬೆ ಅಮ್ಮನಾಗಿ ಪ್ರಸಿದ್ಧಿಯಾದಳು"

ಈ ಕಥೆಯನ್ನು ಪರಿಶೀಲಿಸಿದಾಗ ಹಲವಾರು ಪ್ರಶ್ನೆಗಳು ಏಳುವುದು ಸಹಜ. ಈ ಕಥೆ ಮಹಿಳೆಯ ಹೆಸರಿನ್ನಾಗಲೀ ಅಥವಾ ಗಂಡನ ಹೆಸರಿನ್ನಾಗಲೀ ತಿಳಿಸುವುದಿಲ್ಲ. ಊಟ ತರುವುದು ತಡವಾಯಿತು, ಆ ಕಾರಣಕ್ಕೆ ಅವರು ಊಟಕ್ಕೆ ಬಾರದಿದ್ದುದು ಅವಳ ಭೂಪ್ರವೇಶವಾಯಿತು ಎಂದು ಕಥೆಯಲ್ಲಿ ಹೇಳುವುದು ಕ್ಷುಲ್ಲಕ ಕಾರಣವೆಂದೇ ಭಾವಿಸಬೇಕಾಗುತ್ತದೆ. ಅವಳ ಆತ್ಮಹತ್ಯೆಯ ಹಿಂದೆ ಏನೋ ಬಲವಾದ ಕಾರಣವಿರಬೇಕು ಎಂಬ ಸಂದೇಶ ಮೂಡುತ್ತದೆ. ಒಣಗಿದ ಮರದ ಮೇಟಿ ಇಬ್ಭಾಗವಾಗುವುದು ಅದು ಚಿಗುರುವುದು ವಿಸ್ಮಯಕಾರಿ ಸಂಗತಿ. ಇವೆಲ್ಲಾ ವಾಸ್ತವಕ್ಕೆ ದೂರವಾದ ಘಟನೆಗಳನ್ನಬಹುದು. ವೈಜ್ಞಾನಿಕವಾಗಿ ವಿಶ್ಲೇಸಿದರೆ ಇದೊಂದು ಕಟ್ಟುಕಥೆಯಾಗಿದೆ. ಪ್ರಾಯಶಃ ಅವಳೇನಾದರೂ ಸತಿ ಸಹಗಮನ ಅಥವಾ ಅನುವು............ಮಾಡಿಕೊಂಡಿದ್ದಾರೆ. ಸತಿ ಕಲ್ಲಾದರೂ ಇರಬೇಕಾಗಿತ್ತು. ಅದೂ ಕೂಡಾ ಇಲ್ಲಿ ದೊರಕದೆ ಇರುವುದರಿಂದ ಇದೊಂದು ಜಾನಪದ ಕಥೆಯೂ ಇರಬೇಕೆನಿಸುತ್ತದೆ.

ಈ ಕಥೆಯನ್ನು ಪ್ರಭುವನಹಳ್ಳಿ, ಗುಬ್ಬಿಹೊಸಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಹೆಣೆಯಲಾಗಿದೆ. ಇದೇ ರೀತಿ ನಾಗಸಂದ್ರದ ಕೆಂಪಮ್ಮದೇವಿಯ ಕಥೆಯಲ್ಲಿಯೂ ಕೂಡಾ ಬರುತ್ತದೆ. ಪ್ರಭುವನಹಳ್ಳಿ ಗುಬ್ಬಿ ಹೊಸಳ್ಳಿಗೆ 4 ಕಿಮೀ ಅಂತರದಲ್ಲಿದೆ. ಗುಬ್ಬಿ ಹೊಸಹಳ್ಳಿ ಪಾಳೇಗಾರರ ಕೈಪಿಯತ್ತಿನಲ್ಲಿ ಉಲ್ಲೇಖವಾಗಿರುವಂತೆ"

"ತೋಟಪ್ಪ ಗೌಡರ ಮಗ ವೀರಪ್ಪಗೌಡರು ಗುಬ್ಬಿಗೆ ಪೂರ್ವಭಾಗದಲ್ಲಿ ದಟ್ಟ ಅರಣ್ಯದಲ್ಲಿ ಧಾತೃ ಸಂವತ್ಸರದ ಮಾಘ ಮಾಸದಲ್ಲಿ ಒಂದು ಕೋಟೆ ಕಟ್ಟಿ ನಾವು ಪ್ರಭುವಾದವರು. ಆದ್ದರಿಂದ ಅದಕ್ಕೆ ಪ್ರಭುವನ ಹಳ್ಳಿ ಎಂದು ಹೆಸರಿಟ್ಟರು" ಇದನ್ನು ಗಮನಿಸಿದಾಗ ಪ್ರಭುವನಹಳ್ಳಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶ ದಟ್ಟವಾದ ಅರಣ್ಯದಿಂದ ಕೂಡಿತ್ತೆಂದು ಸ್ಪಷ್ಟವಾಗುತ್ತದೆ. ಪ್ರಸ್ತುತ ಆಲದಕೊಂಬೆ ಅಮ್ಮ ಇರುವ ಸ್ಥಳ ಪ್ರಭುವನ ಹಳ್ಳಿಗೆ ಸಮೀಪದಲ್ಲಿಯೇ ಇದೆ. ಆದ್ದರಿಂದ ಆ ಸ್ಥಳದಲ್ಲಿ ಆಲದಮರಗಳು ಹೆಚ್ಚಾಗಿ ಬೆಳೆದಿದ್ದರಬಹುದು. ಈಗಲೂ ಕೂಡಾ ಅಲ್ಲಿ ಹೆಚ್ಚು ಆಲದ ಮರಗಳೇ ಇರುವುದನ್ನು ಕಾಣುತ್ತೇವೆ. ಈ ರೀತಿ ಬೆಳೆದ ಆಲದ ಮರದ ಕಾಡಿನಲ್ಲಿ ಪ್ರಸ್ತುತ ದೇವಾಲಯವಿರುವ ಜಾಗದ ಆಲದ ಮರವೊಂದರ ಕೊಂಬೆಯು ವಿಶಿಷ್ಟವಾಗಿ ಬೆಳೆದು ದೇವತೆಯ ರೂಪದಂತೆ ಕಂಡಿರಬಹುದು. ಏಕೆಂದರೆ ಈಗಲೂ ಕೂಡಾ ನಾವು ಮರದ ಬುಡ ಗಣೇಶನಾಕಾರದಲ್ಲಿರುವುದು ಬೆಳೆದ ಪಪ್ಪಾಯಿ ಕೂಡಾ ಗಣೇಶನಾಕಾರದಲ್ಲಿರುವುದು. ಮರದಲ್ಲಿ ರಸ ಸ್ರವಿಸುವುದು ಬೇವಿನ ಮರಕ್ಕೆ ಸೀರೆ ಉಡಿಸಿ ಪೂಜಿಸುವುದು ಅರಳೀಮರ ಪೂಜಿಸುವುದು, ಸರ್ವೇಸಾಮಾನ್ಯವಾದ ಸಂಗತಿಗಳಾಗಿವೆ. ಕಾಡನ್ನು ಕಡಿದು ಹಾಳು ಮಾಡಬಾರದು ಎಂಬ ಉದ್ದೇಶದಿಂದ ಅದನ್ನು ದೇವರ ಕಾಡು ಎಂದು ಹೇಳುವುದರ ಮೂಲಕ ಜನರಲ್ಲಿ ಭಯಬೀತಿ ಹುಟ್ಟಿಸಿ ರಕ್ಷಿಸುವುದು. ಇವೆಲ್ಲ ಹಿಂದಿನವರು ಪರಿಸರವನ್ನು ರಕ್ಷಿಸಲು ಮಾಡಿದ ತಂತ್ರಗಳಾಗಿವೆ.

ಇದನ್ನು ಹಿನ್ನೆಲೆಯಾಗಿಟ್ಟುಕೊಂಡು ನೋಡಿದರೆ ಪ್ರಾಯಶಃ ಆಲದಕೊಂಬೆ ಅಮ್ಮನೂ ಈ ರೀತಿ ಸೃಷ್ಠಿಯಾಗಿರಬಹುದು. ಯಾವಾಗಲೂ ಪ್ರಕೃತಿಯಲ್ಲಿ ವಿಶಿಷ್ಟವಾಗಿರವುದು. ಎಲ್ಲರನ್ನು ಗಮನ ಸೆಳೆಯುತ್ತದೆ. ಆದ್ದರಿಂದ ಪ್ರಸ್ತುತ ದೇವಾಲಯವಿರುವ ಸ್ಥಳದಲ್ಲಿ ಬೆಳೆದಿದ್ದ ಆಲದ ಮರದಲ್ಲಿ ವಿಶಿಷ್ಠವಾದ ಕೊಂಬೆ ಬೆಳೆದಿದ್ದು, ಅದು ವಿಶೇಷವಾಗಿದ್ದುದರಿಂದ ಅದನ್ನು ಕಂಡ ಜನರು ಪೂಜಿಸಲು ಆರಂಭಿಸಿರಬೇಕು. ಕ್ರಮೇಣ ಅದು ಪ್ರಸಿದ್ಧಿಯಾಗಿರಬೇಕು. ಆ ನಂತರ ಅದಕ್ಕೆ ಅನೇಕ ಆಚರಣೆ ಸಂಪ್ರದಾಯಗಳನ್ನು ಅಳವಡಿಸಿರಬೇಕು. ಆದರೆ ಇದು ಪ್ರಸಿದ್ಧಿಯಾದ ನಂತರ ಗುಬ್ಬಿಹೊಸಳ್ಳಿ ಪಾಳೇಗಾರರು ಇಂಥಹ ಆಚರಣೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಆ ದೇವತೆಯ ಭಕ್ತ ಬೆಂಬಲವನ್ನು ಗಳಿಸಿಕೊಂಡರು ಆನಂತರ ಇದನ್ನು ಕಾಪಾಡಿಕೊಳ್ಳಲು ಅವರು ಈ ದೇವತೆಯನ್ನು ತಮ್ಮ ಸಂಸ್ಥಾನದ ದೇವತೆಯನ್ನಾಗಿ ಮಾಡಿಕೊಂಡಿರಬೇಕು.

### "33 ಹಳ್ಳಿಯ ಲಿಂಗಾಯತರ ಶಕ್ತಿದೇವತೆ"

ಗುಬ್ಬಿಹೊಸಳ್ಳಿ ಪಾಳೇಗಾರರು ಲಿಂಗಾಯತ ಜನಾಂಗಕ್ಕೆ ಸೇರಿದವರು. ಇವರ ಮನೆದೇವರು ವೀರಭದ್ರಸ್ವಾಮಿ. ಆದರೂ ಇವರು ಶಕ್ತಿದೇವತೆಯನ್ನು ಪೂಜಿಸುತ್ತಿದ್ದರೆಂದು ಕ್ರಿ.ಶ.1800ರಲ್ಲಿ ಗುಬ್ಬಿಯಲ್ಲಿ ಪ್ರವಾಸ ಮಾಡಿದ್ದ ಪ್ರಾನ್ಸಿಸ್ ಬುಕಾನನ್ನು ತಿಳಿಸುತ್ತಾನೆ. ಆತನು ಆ ಶಕ್ತಿದೇವತೆಯ ಹೆಸರನ್ನು ತಿಳಿಸಿಲ್ಲ. ಪ್ರಾಯಶಃ ಆಶಕ್ತಿ ದೇವತೆಯೇ ಆಲದಕೊಂಬೆ ಅಮ್ಮನಿರಬಹುದು ಎಂದು ಹೇಳಬಹುದು. ಇವರು ಈ ದೇವತೆಯು ಆರಾಧಕರಾಗಿದ್ದರೂ ಕೂಡಾ ಅದನ್ನು ಪೂಜಿಸುವವರು ತಳಸಮುದಾಯದ ಪರಿಶಿಷ್ಠಪಂಗಡಕ್ಕೆ ಸೇರಿದ ನಾಯಕ ಜನಾಂಗದವರು.

ಮೂಲತಃ ಈ ದೇವತೆಯನ್ನು ಆಲದ ಮರದ ಕೊಂಬೆಯಲ್ಲಿ ಪೂಜಿಸುತ್ತಿದ್ದ ಆ ಭಾಗದ ಜನತೆ ನಂತರ ಮರದ ಪ್ರತಿಮೆಯನ್ನು ಮಾಡಿ ಪೂಜಿಸತೊಡಗಿದರು. ಆಲದ ಕೊಂಬೆ ಅಮ್ಮನ ಮೂಲಸ್ಥಳವಾದ ಬಾರೆಯಲ್ಲಿ ಆಯತಾಕಾರದ ಮಂಟಪವಿತ್ತು. ಅಲ್ಲಿ ಜಾತ್ರಾ ಸಂದರ್ಭದಲ್ಲಿ ಮರದಮೂರ್ತಿಯನ್ನಿಟ್ಟು ಪೂಜಿಸಲಾಗುತ್ತಿತ್ತು. ಇತ್ತೀಚೆಗೆ ಆ ಮಂಟಪವನ್ನು ಕೆಡವಿ ಆ ಸ್ಥಳದಲ್ಲಿ ಕಲ್ಲಿನ ದೇವಾಲಯವನ್ನು ನಿರ್ಮಿಸಲಾಗಿದೆ. ಅಲ್ಲದೆ ಗರ್ಭಗುಡಿಯಲ್ಲಿ ದೇವತೆಯು ಶಿಲೆಯಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವತೆಗೆ ಗುಬ್ಬಿಹೊಸಳ್ಳಿಯ ದೇವಾಲಯ ನಿರ್ಮಿಸಿ ಅಲ್ಲಿ ಮರದಲ್ಲಿ ಮಾಡಿರುವ ದೇವರೆಯ ಪ್ರತಿಮೆಯನ್ನು ಪೂಜಿಸಲಾಗುತ್ತಿದೆ. ಈ ದೇವತೆ ಶಕ್ತಿದೇವತೆಯಾದರೂ ಸೌಮ್ಯ ಸ್ವಭಾವದ ಮುಖಭಾವವನ್ನು ಹೊಂದಿದ್ದು, ಎದೆಮಟ್ಟದ ಬಿಂಬವಾಗಿದೆ. ಇದಕ್ಕೆ ಎರಡು ಕೈಗಳಿದ್ದು ಒಂದರಲ್ಲಿ ತ್ರಿಶೂಲವನ್ನು

ಮತ್ತೊಂದರಲ್ಲಿ ಢಮರುಗವನ್ನು ಹಿಡಿದಿದೆ. ದೊಡ್ಡದಾದ ವೃತ್ತಾಕಾರದ ಮೂರ್ತಿ ವಿಶಾಲವಾದ ಕಣ್ಣುಗಳು ತಿದ್ದಿತೀಡಿರುವಂತಹ ಹುಬ್ಬು, ಆಭರಣಗಳಿಂದ ಅಲಂಕೃತವಾಗಿದೆ. ಇಂಥಹ ದೇವತೆಗೆ ಮೂರು ವರ್ಷಗಳಿಗೊಮ್ಮೆ ಮೂರು ದಿನಗಳ ಕಾಲ ಜಾತ್ರೆ ನಡೆಯುತ್ತದೆ.

**ಜಾತ್ರೆಯ ವಿಧಿ ವಿಧಾನಗಳು**

ಇದೊಂದು ಶಕ್ತಿದೇವತೆಯ ಜಾತ್ರೆ. ಆ ಪ್ರದೇಶದ ಜಾನಪದರು ಅದೇ ದೇವತೆಗೆ ತಮ್ಮದೇ ಆದ ವಿಧಿವಿಧಾನಗಳನ್ನು ಅನುಸರಿಸುತ್ತಾರೆ. ಇದರಲ್ಲಿ ನಮ್ಮ ಜನರ ಮೌಢ್ಯಗಳು ಪ್ರದರ್ಶಿತವಾಗುತ್ತವೆ. ಆದರೆ ಆ ದೇವತೆಯ ಶಕ್ತಿಯಲ್ಲಿ ಅವರಿಗಿರುವ ಅಚಲ ನಂಬಿಕೆ ಮೆಚ್ಚುವಂತಹದು. ಆ ನಂಬಿಕೆಯೇ ಭಕ್ತಿಯಾಗಿ, ಆ ಭಕ್ತಿಯೇ ಅವಿರ್ಭವಿಸಿದ ಶಕ್ತಿಯಾಗಿ ಒಂದು ಅದ್ಭುತ ಪವಾಡವೆನಿಸಿ ಮೆರೆಯುತ್ತದೆ. ನಮ್ಮ ಗ್ರಾಮೀಣ ಸಂಸ್ಕೃತಿಯ ಜ್ವಲಂತ ನಿದರ್ಶನಗಳೇ ನಮ್ಮ ಜಾನಪದ ಜಾತ್ರೆಗಳು. ನಮ್ಮ ಜಾತ್ರೆಗಳೇ ನಮ್ಮ ಸಂಸ್ಕೃತಿಯ ವಸ್ತು ಪ್ರದರ್ಶನ ಜಾತ್ರೆಗಳು ಒಂದರಿಂದ ಏಳು ದಿನಗಳ ಕಾಲ ಜರುತ್ತವೆ. ಆದರೆ ಆಲದಕೊಂಬೆ ಅಮ್ಮನ ಜಾತ್ರೆ ಮಾತ್ರ ಮೂರು ದಿನಗಳ ಕಾಲ ನಡೆಯುತ್ತದೆ. ಜಾತ್ರೆಗಳಲ್ಲಿ ರಥೋತ್ಸವ ಉತ್ಸವಗಳೇ ಪ್ರಮುಖ ಆಕರ್ಷಣೆ. ಆದರೆ ಈ ದೇವತೆಯು ಜಾತ್ರೆಯಲ್ಲಿ ರಥೋತ್ಸವ ಇಲ್ಲ. ಇಲ್ಲಿನ ಆಚರಣೆಗಳು ಭಿನ್ನವೂ, ವೈಶಿಷ್ಟಪೂರ್ಣವೂ ಅಗಿವೆ. ಅವುಗಳನ್ನು ಈಗ ಪರಿಶೀಲಿಸೋಣ.

ಆಲದಕೊಂಬೆ ಅಮ್ಮನ ಜಾತ್ರೆಯು ಮೂರು ವರ್ಷಗಳಿಗೊಮ್ಮೆ ಜೇಷ್ಠ ಮಾಸದಲ್ಲಿ ನಡೆಯುತ್ತದೆ. ಇದಕ್ಕಿಂತ ಮೊದಲು ಗುಬ್ಬಿಹೊಸಳ್ಳಿ ಸಂಸ್ಥಾನದ ಅರಸು ಮನೆತನದವರ ನೇತೃತ್ವದಲ್ಲಿ 33 ಹಳ್ಳಿಗಳ ಹಿರಿಯರು ಗುಬ್ಬಿಹೊಸಳ್ಳಿಯಲ್ಲಿ ಸಭೆ ಸೇರಿ ಜಾತ್ರೆಯ ದಿನಾಂಕವನ್ನು ನಿಗದಿಪಡಿಸುವರು. ಆನಂತರ ಆಯಾಯಾ ಗ್ರಾಮದ ಮುಖಂಡರು ತಮ್ಮ ತಮ್ಮ ಗ್ರಾಮಗಳೆಲ್ಲ ಜಾತ್ರೆಗೆ ಹದಿನೈದು ಅಥವಾ ಇಪ್ಪತ್ತು ದಿನ ಮೊದಲೇ ಡಂಗುರು ಸಾರಿಸುವುದರ ಮೂಲಕ ಜಾತ್ರಾ ಮಹೋತ್ಸವದ ದಿನಾಂಕವನ್ನು ತಿಳಿಸುತ್ತಾರೆ. ಹೀಗೆ ಜಾತ್ರೆಗೆ ಹದಿನೈದು ದಿನ ಮೊದಲೇ ಎಲ್ಲ ಭಕ್ತರು ಸಿದ್ಧತೆ ಮಾಡಿಕೊಳ್ಳುವರು.

**ಮೊದಲನೆ ದಿನದ ಆಚರಣೆ**

**ತವರು ಮನೆ ಮಡಿಲಕ್ಕಿ**

ಈ ಜಾತ್ರೆ ಆರಂಭವಾಗುವುದು ಆಲದಕೊಂಬೆ ಅಮ್ಮನ ಮಡಿಲಕ್ಕಿ ಶಾಸ್ತ್ರದಿಂದ ಅಮ್ಮನವರು ಪ್ರಭುವಿನಹಳ್ಳಿಯ ಹೆಣ್ಣಾಗಿರುವುದರಿಂದ ತವರು ಗ್ರಾಮದ ಭಕ್ತಿ ಸಮುದಾಯ ಅಲ್ಲಿನ ಹಿರಿಯರ ನೇತೃತ್ವದಲ್ಲಿ ಮಡಿಲಕ್ಕೆ ಬರುತ್ತದೆ.(ಸೀರೆ, ಕಣ, ಹೂ, ಹಣ್ಣು, ಅರಿಸಿನ, ಕುಂಕುಮ, ಬಳೆ ಇತ್ಯಾದಿ). ಈ ಸೇವೆ ಗುಬ್ಬಿಹೊಸಳ್ಳಿಯಲ್ಲಿನ ಆಲದಕೊಂಬೆ ಅಮ್ಮನ ದೇವಾಲಯದಲ್ಲಿ ಸಂಸ್ಥಾನದ ಅರಸು ಮನೆತನದವರ ಸಮ್ಮುಖದಲ್ಲಿ ನಡೆಯುತ್ತದೆ. ಅಮ್ಮನವರಿಗೆ ತವರು ಮನೆಯಿಂದ ತಂದ ಸೀರೆ ಬಳೆಗಳನ್ನು ಹಾಕಿ ಸಿಂಗರಿಸಿ ಮಂಗಳಾರತಿ ಮಾಡಲಾಗುತ್ತದೆ. ಆನಂತರ ಅಮ್ಮನವರನ್ನು ಪೀಠದಿಂದ ಎತ್ತಿ ರಾಜನ ನೇತೃತ್ವದಲ್ಲಿ ಉತ್ಸವದ ಮೂಲಕ ಗುಬ್ಬಿಹೊಸಳ್ಳಿಗೆ 2ಕಿಮೀ ಅಂತರದಲ್ಲಿರುವ ಮೂಲ ದೇವಾಲಯವಿರುವ ಸ್ಥಳಕ್ಕೆ ಕರೆದೊಯ್ಯಲಾಗುತ್ತದೆ. ಹೀಗೆ ಮೊದಲನೆ ದಿನ ರಾತ್ರಿ 10 ಗಂಟೆಗೆ ಹೊರಟ ದೇವಿಯ ಮೆರವಣಿಗೆಯ ಮಾರ್ಗದಲ್ಲಿ ಅಲ್ಲಲ್ಲಿ ಕುರಿ, ಮೇಕೆಯನ್ನು ಬಲಿಕೊಡಲಾಗುತ್ತದೆ. ಮೊದಲನೆ ಬಲಿಯನ್ನು ಊರಿನ ಹೆಬ್ಬಾಗಿಲಿನಲ್ಲಿ ಅರ್ಪಿಸಲಾಗುತ್ತದೆ. ಮಧ್ಯರಾತ್ರಿಯವರೆಗೂ ನಡೆಯುವ ಈ ಧಾರ್ಮಿಕ ಕ್ರಿಯೆ ಬಾರೆಯ ಮೇಲಿನ ದೇವಾಲಯದ ಆವರಣಕ್ಕೆ ಸಮೀಪಿಸಿದ ನಂತರ ದೇವರ ಪಾಲಿಕೆಯನ್ನು ಇಳಿಸಿ ದೇವತೆಗೆ ಅರಸನ ನೇತೃತ್ವದಲ್ಲಿ ಪೂಜೆ ಸಲ್ಲಿಸಲಾಗುವುದು. ಆ ನಂತರ ಅರಸ ತನ್ನ ಮನೆಗೆ ಹಿಂತಿರುವನು. ದೇವತೆಯ ಜೊತೆ ಮೆರವಣಿಗೆಯಲ್ಲಿ ಆಗಮಿಸಿದ್ದವರೆಲ್ಲಾ ದೇವಾಲಯ ಆವರಣದಲ್ಲಿ ಉಳಿಯುವರು.

**ಎರಡನೇ ದಿನ**

**ಆರತಿ ಸೇವೆ**

ಈ ಜಾತ್ರೆಯ ಪ್ರಮುಖ ಆಕರ್ಷಣೆ ಆರತಿಸೇವೆ. ಇದು ಎರಡನೇ ದಿನ ರಾತ್ರಿವೇಳೆ ಜರುಗುವ ಧಾರ್ಮಿಕ ಕ್ರಿಯೆ. ಈ ಗ್ರಾಮದೇವತೆಯು 33 ಹಳ್ಳಿಗಳ 18 ಕೋಮಿನ ಭಕ್ತ ಸಮುದಾಯ ತಂಬಿಟ್ಟಿನಿಂದ ತಯಾರಿಸಿದ ಆರತಿಗೆ ವಿವಿಧ ಹೂಗಳಿಂದ ಅಲಂಕರಿಸಿ ತಮ್ಮ ಮನೆಯಲ್ಲಿ ಪೂಜೆ ಮಾಡಿಕೊಂಡು 33 ಗ್ರಾಮಗಳ ಕೇಂದ್ರ ಮತ್ತು ಆಲದಕೊಂಬೆ ಅಮ್ಮನ ಸ್ಥಳವಾದ ಗುಬ್ಬಿ ಹೊಸಳ್ಳಿಗೆ ಬಂದು ಹೆಬ್ಬಾಗಿಲಿನಲ್ಲಿ ಸೇರುವರು. ಇದೇ ವೇಳೆಗೆ ಗುಬ್ಬಿ ಹೊಸಳ್ಳಿ ಆರತಿಗಳು ಆ ಗ್ರಾಮದ ಅಮ್ಮನವರ ದೇವಾಲಯದಿಂದ ಉತ್ಸವಮೂರ್ತಿಯ ಜೊತೆ ಅರಸನ ನೇತೃತ್ವದಲ್ಲಿ ಹೊರಟು ಹೆಬ್ಬಾಗಿಲಿಗೆ ಆಗಮಿಸುವರು.

ಅರಸನ ನೇತೃತ್ವದಲ್ಲಿ ಗುಬ್ಬಿ ಹೊಸಳ್ಳಿ ಆರತಿಗಳು ವಾದ್ಯಸಮೇತ ಮುಂದೆ ಸಾಗಿದರೆ ಅದರ ಹಿಂದೆ 33 ಹಳ್ಳಿಗಳ ಎಲ್ಲ ಆರತಿಗಳು ಮತ್ತು ಆಲದಕೊಂಬೆ ಅಮ್ಮನವರನ್ನು ಹೊತ್ತ ಪಾಲಿಕೆ ಸಾಗುವುದು. ಮೆರವಣಿಗೆ ನಿಧಾನಗತಿಯಲ್ಲಿ ಸಾಗುತ್ತಾ ಬೆಳಗಿನ ಜಾವದವೇಳಗೆ ಬಾರೆಯಲ್ಲಿರುವ ಅಮ್ಮನವರ ದೇವಾಲಯವನ್ನು ತಲುವುದು.

**ಅಗ್ನಿಕೊಂಡ ಸೇವೆ**

ಅಗ್ನಿಕೊಂಡ ಗ್ರಾಮದೇವತೆಗಳ ಪ್ರಮುಖ ಆಚರಣೆ, ಹರಕೆ ಮಾಡಿಕೊಂಡವರು ಅಗ್ನಿಕೊಂಡದಲ್ಲಿ ಹಾದುಹೋಗುವ ಪರಂಪರೆ ಭಾರತೀಯ ಜಾನಪದ ಸಂಸ್ಕೃತಿಯ ವಿಶಿಷ್ಠ ಲಕ್ಷಣವಾಗಿದೆ. ಇದೊಂದು ಬೆಳಗಿನ ಜಾವ ನಡೆಯುವ ಧಾರ್ಮಿಕ ಕ್ರಿಯೆ. ಬರಿಗಾಲಿನಲ್ಲಿ ಅಗ್ನಿಕೊಂಡದಲ್ಲಿ ಸಾಗಿ ಬಂದರೆ ತಮ್ಮ ಕಷ್ಟಗಳನ್ನೆಲ್ಲಾ ದೇವತೆ ಪರಿಸರಿಸುತ್ತಾಳೆ ಎಂಬ ನಂಬಿಕೆ ಭಕ್ತರದಲ್ಲಿದೆ. ಆದುದರಿಂದ ಈ ದೇವರೆಯ ಮುಂಭಾಗದಲ್ಲಿ ಆಯುತಾಕಾರದ ಗುಂಡಿಯನ್ನು ತೋಡಿ ಅದರೊಳಗಿನ ಒಣಗಿದ ವಿವಿಧ ಮರದ ಸೌಧೆಗಳನ್ನು ಸುಟ್ಟು ಕೆಂಡ ಮಾಡುವರು. ಆ ಕೊಂಡಕ್ಕೆ ದೇವಾಲಯದ ಅರ್ಚಕ ಧಾರ್ಮಿಕ ವಿಧಿವಿಧಾನ ನೆರವೇರಿಸಿ ಹಾಯಲು ಸಿದ್ಧತೆ ಮಾಡುವರು.

**ಪ್ರಾಣಿಬಲಿ**

ಅಗ್ನಿಕೊಂಡವನ್ನು ಸಿದ್ಧತೆ ಮಾಡಿದ ನಂತರ ದೇವತೆಗೆ ಬಿಟ್ಟಿದ್ದ ಪಟ್ಟದ ಕೋಣವನ್ನು ಬಲಿಕೊಡುವರು. ಹಿಂದೆ ಈ ಕ್ರಿಯೆ ನಡೆಯುತ್ತಿತ್ತು. ಆದರೆ ಈಗ ಪ್ರಾಣಿ ಬಲಿಯನ್ನು ನಿಷೇದಪಡಿಸಿರುವುದರಿಂದ ಮೇಕೆಯನ್ನು ಬಲಿಕೊಡುವರು. ಆ ನಂತರ ಅದರ ರಕ್ತವನ್ನು ಅನ್ನದೊಂದಿಗೆ ಬೆರೆಸಿ ಗುಬ್ಬಿಹೊಸಳ್ಳಿ ಊರಿನ ಸುತ್ತ ಹಾಕುವರು. ಹೀಗೆ ಮಾಡುವಾಗ ಊರಿನ ಯಾರೊಬ್ಬರೂ ಕಾಣಿಸಬಾರದು ಎಂಬ ನಂಬಿಕೆ ಇದೆ. ಹೀಗೆ ಯಾರಿಗೂ ಕಾಣದಂತೆ ಊರಿನ ಸುತ್ತ ಹಾಕುವರು. ಆನಂತರ ದೇವತೆಗೆ ಮತ್ತೊಂದು ಕೋಣದ ಮರಿಯನ್ನು ಬಿಡುವರು.

**ಅಗ್ನಿಕೊಂಡ ಹಾಯುವುದು**

ಆರತಿ ಹೊತ್ತ ಮಹಿಳೆಯರು ಪುರುಷರು ಅಗ್ನಿಕೊಂಡ ಹಾಯಲು

ಸಿದ್ಧರಾಗುವರು. ಮೊದಲು ದೇವತೆಯನ್ನು ಹೊತ್ತವರು ಬರಿಗಾಲಲ್ಲಿ ಕೊಂಡ ಹಾದರೆ ಅವರನ್ನು ಅನುಸರಿಸಿದಂತೆ ವಿವಿಧ ಹೂಗಳಿಂದ ಅಲಂಕೃತಗೊಂಡಿದ್ದ ಆರತಿಯನ್ನು ಹೊತ್ತವರು ಸಾಗುವರು. ಆನಂತರ ಭಕ್ತಾದಿಗಳು ಕೊಂಡ ಹಾಯುವರು. ಆರತಿ ಹೊತ್ತರು ತಮ್ಮತಮ್ಮ ಅರತಿಗಳಿಗೆ ತುಪ್ಪದಲ್ಲಿ ನೆನಸಿದ ಬತ್ತಿಯನ್ನು ಹಂಚಿಕಡ್ಡಿಗೆ ಸುತ್ತಿ ಅದನ್ನು ಆರತಿಗೆ ಚುಚ್ಚಿ ದೇವತೆಗೆ ಬೆಳಗುವರು. ಆನಂತರ ಆರತಿಗೆ ಉಪಯೋಗಿಸಿದ್ದ ತಂಬಿಟ್ಟು ಪ್ರಸಾದವೆಂದು ಎಲ್ಲರಿಗೂ ವಿತರಿಸುವರು. ಈ ಪ್ರಕ್ರಿಯೆಗಳಲ್ಲಿ ಮುಗಿಯುವುದರೊಳಗಾಗಿ ಬೆಳಗಾಗಿರುತ್ತದೆ. ಪ್ರತಿಯೊಂದು ಧಾರ್ಮಿಕ ಕ್ರಿಯೆಯಲ್ಲಿ ಅರಸನ ಪಾಲ್ಗೊಳ್ಳುವಿಕೆ ಅಗತ್ಯವಾಗಿರುತ್ತದೆ. ಎರಡನೇ ದಿನದ ಆಚರಣೆ ಮುಗಿದ ಮೇಲೆ ಅರಸ ತನ್ನ ಮನೆಗೆ ಹಿಂದಿರುಗುವನು.

**ಕುರ್ಜು ಸೇವೆ.**

33 ಹಳ್ಳಿಗಳಿಂದ ಬರುವ ಆರತಿಯ ಜೊತೆಗೆ ವಿಭಿನ್ನವಾಗಿ ಸಿಂಗರಿಸಲ್ಪಟ್ಟ ಕುರ್ಜುಗಳೂ ಕೂಡಾ ಆಗಮಿಸುವರು. ಈ ಕುರ್ಜು ತೇರಿನಾಕೃತಿಯಲ್ಲಿ ಬಂಡಿಯ ಮೇಲೆ ಕಟ್ಟುವರು. ಇತ್ತೀಚೆಗೆ ಇದನ್ನು ಟ್ರ್ಯಾಕ್ಟರ್ ಮೇಲೆಯೂ ನಿರ್ಮಿಸುವರು. ಇದನ್ನು ಬಂಡಿ ಎಂತಲೂ ಕೆಲವು ಕಡೆ ಕರೆಯುವರು. ಇವುಗಳೆಲ್ಲಾ ಮೂಲ ದೇವಾಲಯವಿರುವ ಬಾರೆಯ ಮೇಲೆ ಸೇರುವುದು. ಇದರಲ್ಲಿ ಆಲದಕೊಂಬೆ ಅಮ್ಮನ ಉತ್ಸವಮೂರ್ತಿಯನ್ನಿಟ್ಟು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದ ನಂತರ ಇನ್ನುಳಿದ ಗ್ರಾಮಗಳ ಕುರ್ಜುಗಳು ಪ್ರದಕ್ಷಿಣೆ ಹಾಕಬೇಕುತ್ತದೆ.. ಈ ಕ್ರಿಯೆ ಮುಗಿದ ನಂತರ ಎರಡನೇ ದಿನದ ರಾತ್ರಿ ಆಚರಣೆಗಳು ಮುಕ್ತಾಯಗೊಳ್ಳುತ್ತವೆ. ನಂತರ ಅರಸನು ತನ್ನ ಗ್ರಾಮಕ್ಕೆ ಹಿಂತಿರುಗವನು.

**ಮೂರನೇ ದಿನ ಹಗಲು ಆಚರಣೆ**

ಈ ಜಾತ್ರಾ ಮಹೋತ್ಸವದ ಮೂರನೇ ದಿನ ಎಲ್ಲ 33 ಹಳ್ಳಿಗಳೆಲ್ಲಾ ಸಂಭ್ರಮ ಮಡುಗಟ್ಟಿರುತ್ತದೆ. ಇದು ಅಂದು ಮಧ್ಯಾಹ್ನ 1 ಗಂಟೆಗೆ ಆರಂಭವಾಗಿ ರಾತ್ರಿ 8 ಗಂಟೆಯತನಕ ಮುಂದುವರಿಯುತ್ತದೆ. ಅಂದಿನ ದಿನ ಸಸ್ಯಹಾರಿಗಳು ಪಾಯಸ, ಹೋಳಿಗೆ ಮಾಡಿ ಸವಿದರೆ ಮಾಂಸಹಾರಿಗಳು ಕುರಿ, ಕೋಳಿ ಮಾಂಸದ ಅಡುಗೆ ಊಟ ಮಾಡುವರು. ಆಲದಕೊಂಬೆ ಅಮ್ಮನ 33 ಹಳ್ಳಿ ಭಕ್ತರ ಜೊತೆಗೆ ನಾನಾ ಕಡೆಗಳಿಂದ ಈ ಜಾತ್ರೆಯನ್ನು ನೋಡಲು ಅಂದು ಆಗಮಿಸುವರು. ಆ ದಿನದ ಆರ್ಕಷಣೆಗೆ ಗುಬ್ಬಿ ಹೊಸಳ್ಳಿ ಸಂಸ್ಥಾನದ ಅರಸು ಮನೆತನಕ್ಕೆ ಸೇರಿದ ಹುಚ್ಚೀಪ್ಪಾಜಿ ಅರಸು ಅವರನ್ನು ಕುದುರೆಯಲ್ಲಿ ಕೂರಿಸಿ ಮೆರವಣಿಗೆ ಮಾಡುವುದು. ಈ ಧಾರ್ಮಿಕ ಕಾರ್ಯ ಅಂದು ಮಧ್ಯಾಹ್ನ 1.00 ಗಂಟೆಗೆ ಆರಂಭವಾಗುವುದು.

ಗುಬ್ಬಿಹೊಸಳ್ಳಿ ಸಂಸ್ಥಾಪನದ ವಂತಿಕೆ ಅರಸು ಹುಚ್ಚೀರಪ್ಪಾಜಿ ರಾಜಪೋಷಾಕಿನಲ್ಲಿ ತಮ್ಮ ಮನೆಯಲಿರುವರು. ಇವರನ್ನು ಸಕಲ ಗೌರವಗಳಿಂದ ಆಹ್ವಾನಿಸಲು ಪ್ರಭುವನ ಹಳ್ಳಿಯ ಗೌಡಪಟೇಲರ ಸಮ್ಮೇತ 33 ಹಳ್ಳಿಯ ಹಿರಿಯರು ಫಲಪುಷ್ಪ ಸಮೇತ ಅರಸನ ಮನೆಗೆ ಆಗಮಿಸಿ ಅವರಿಗೆ ಅವುಗಳನ್ನು ಅರ್ಪಿಸಿ ಆಹ್ವಾನಿಸುವರು. ಅವರನ್ನು ಗೌಡ ಪಟೇಲ, ದಳವಾಯಿಗಳು ಅರಸನ ಎಡಬಲದಲ್ಲಿ ಕತ್ತಿಯನ್ನಿಡಿದು ಅರಸರ ಮನೆ ದೇವರಾದ ವೀರಭದ್ರಸ್ವಾಮಿ ದೇವಾಲಯಕ್ಕೆ ಕರೆಯೊಯ್ಯುವರು. ಅರಸನು ದೇವರಿಗೆ ಮಂಗಳಾರತಿ ಮಾಡಿ ಪ್ರಸಾದವನ್ನು ಸ್ವೀಕರಿಸುವನು. ಆನಂತರ ದೇವಾಲಯದಿಂದ ನೇರವಾಗಿ ಅರಸನನ್ನು ಕುದುರೆಯ ಸಮೀಪಕ್ಕೆ ಕರೆತರುವರು. ಅಲ್ಲಿ ಅರಸ ಕುದುರೆಗೆ ಪೂಜೆಸಲ್ಲಿಸಿ ಕುದುರೆಯನ್ನು ಹತ್ತುವನು. ಕುದುರೆಯ ಎಡಬಲದಲ್ಲಿ ಕತ್ತಿಹಿಡಿದ ದಳವಾಯಿಗೌಡ ಪಟೇಲರು ನಿಧಾನವಾಗಿ ಹೆಜ್ಜೆ ಹಾಕುತ್ತಾ ಮೆರವಣಿಗೆ ಆರಂಭವಾಗುತ್ತದೆ. ಮೆರವಣಿಗೆಯಲ್ಲಿ ಕುದುರೆಯೇರಿದ ಅರಸನನ್ನು ಕಂಡ ಜನತೆ ಜಯಕಾರ ಹಾಕುವರು. ಕುದುರೆಯ ಮುಂದೆ ಕೊಂಬುಕಹಳೆಯವರು ತಮಟೆಯವರು ಜೋರಾಗಿ ಬಾರಿಸುವರು. ಮೆರವಣಿಗೆ ಸಾಗುವಾಗ ಚೌಡಿಕೆಯವರು ರಾಜನಿಗೆ ಪರಾಕು ಹಾಕುತ್ತಾ ಸಾಗುವರು. ಮೆರವಣಿಗೆಯ ಮುಂಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ಬ್ಯಾಂಡ್ ಸೆಟ್ಟಿನವರಿಂದ ಬ್ಯಾಂಡ್ ಬಾರಿಸುವು ಮತ್ತು ಟ್ರ್ಯಾಕ್ಟರ್ ಮೇಲೆ ಮೈಕನ್ನು ಅಳವಡಿಸಿ ಅದರಲ್ಲಿ ನಿಮ್ಮ ಹಾಡುಗಳನ್ನು ಹಾಕುತ್ತಾ ಅದಕ್ಕೆ ತಕ್ಕಂತೆ ಹೆಜ್ಜೆ ಹಾಕುವ ಯುವಕರ ದಂಡು, ಕೀಲುಕುದುರೆ, ಬೆದರುಬೊಂಬೆ ಮುಂತಾದ ಜಾನಪದ ತಂಡಗಳ ಜೊತೆ ಅರಸನ ಮೆರವಣಿಗೆಯನ್ನು ಮಾಡಲಾಗುತ್ತದೆ. ಗುಬ್ಬಿ ಹೊಸಳ್ಳಿಯಿಂದ ಬಾರೆಯ ಮೇಲಿನ ದೇವಾಲಯದವರೆಗೆ ಈ ಮೆರವಣಿಗೆ ಸಾಗುತ್ತದೆ. ಆ ವೇಳೆಗಾಗಲೇ ಸಹಸ್ರಾರು ಸಂಖ್ಯೆಯ ಭಕ್ತರು ದೇವಾಲಯದ ಬಳಿ ಸೇರುವರು. ಮೆರಣಿಗೆ ದೇವಾಲಯದ ಬಳಿ ಬಂದಾಗ ರಾಜ ಉಡುಪಿನಲ್ಲಿದ್ದ ಅರಸು ತಾನು ಕುಳಿತ ಬಿಳಿಯ ಕುದುರೆಯಿಂದ ಇಳಿದು ನೇರವಾಗಿ ಆಲದಕೊಂಬೆ ಅಮ್ಮನವರ ಸನ್ನಿಧಿಗೆ ಆಗಮಿಸುವರು. ಜನರ ಜಯಕಾರ ಮುಗಿಲು ಮುಟ್ಟುತ್ತದೆ. ಈ ಮೆರವಣಿಗೆ ಮೈಸೂರು ಅರಸರ ಜಂಬೂಸವಾರಿಯನ್ನು ನೆನಪಿಗೆ ತರುತ್ತದೆ.

ಅಮ್ಮನವರಿಗೆ ಪೂಜೆ ಸಲ್ಲಿಸಿದ್ದ ನಂತರ ಅರಸನು ದೇಗುಲದ ಪಕ್ಕದಲ್ಲಿರುವ ಧಾರ್ಮಿಕ ವೇದಿಕೆಗೆ ಹೋಗುತ್ತಾನೆ. ಅಲ್ಲಿ ರಾಜ ಸಭೆ ಆರಂಭವಾಗುತ್ತದೆ. ದರ್ಬಾರ್ ಕುರ್ಚಿಯಲ್ಲಿ ಆಸೀನರಾದ ಅರಸು 33 ಹಳ್ಳಿಯ ಗೌಡಪಟೇಲರಿಗೂ 18 ಕೋಮಿನ ಹಿರಿಯರಿಗೂ ಹಾರ ಹಾಕುವುದರ ಮೂಲಕ ಜಾತ್ರೆಯನ್ನು ಯಶಸ್ವಿಯಾಗಿ ನಡೆಸಿದ್ದಕ್ಕೆ ಗೌರವಿಸುತ್ತಾನೆ. ಆನಂತರ ಅಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತಸ್ತೋಮವನ್ನು ಉದ್ದೇಶಿಸಿ ಮಾತನಾಡಿ ಆಲದಕೊಂಬೆ ಅಮ್ಮನವರು ಸಂಸ್ಥಾನದಾದ್ಯಂತ ಮಳೆ, ಬೆಳೆ ಚೆನ್ನಾಗಿ ಆಗಿ ಜನತೆ ಸುಭಿಕ್ಷವಾಗಿ ಬದುಕುವಂತೆ ನೋಡಿಕೊಳ್ಳಲಿ ಎಂದು ಹೇಳಿ ದೇವತೆಯ ಮೂರ್ತಿಯನ್ನು ಮಾರನೇ ದಿನ ಗುಬ್ಬಿಹೊಸಳ್ಳಿಗೆ ತರುವಂತೆ ಆಜ್ಞಾಪಿಸಿ ತನ್ನ ಮನೆಗೆ ಹಿಂತಿರುಗುವನು. ಆನಂತರ ದೇವತೆಗೆ ಮಹಾ ಮಂಗಳಾರತಿ ಆಗಿ ಪ್ರಸಾದ ವಿನಿಯೋಗಿಸುವರು. ಮಾರನೇ ದಿನ ಬಾರೆಯಲ್ಲಿದ್ದ ದೇವತೆಯನ್ನು ಗುಬ್ಬಿ ಹೊಸಳ್ಳಿಗೆ ಕರೆತಂದು ಅಲ್ಲಿನ ದೇಗುಲದಲ್ಲಿಟ್ಟು ನಿತ್ಯ ಪೂಜಾದಿ ಕಾರ್ಯಗಳನ್ನು ನಡೆಸುವರು.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ, ಆಲದ ಮರದಮ್ಮ, ಬೇವಿನ ಮರದಮ್ಮ ಎಂಬ ಹೆಸರಿನ ದೇವತೆಗಳನ್ನು ಮರದ ಬುಡದಲ್ಲಿ ಪೂಜಿಸಿದರೆ ಆಲದಕೊಂಬೆ ಅಮ್ಮನನ್ನು ಮೂಲತಃ ಆಲದ ಕೊಂಬೆಯಲ್ಲಿ ಪೂಜಿಸುತ್ತಿದ್ದಿರಬಹುದು. ಕಾಲ ಕಳೆದ ನಂತರ ಇದನ್ನು ಮರದ ಪ್ರತಿಮೆಯನ್ನು ತಯಾರಿಸಿ ಪೂಜಿಸಲಾರಂಭಿಸಿದರೆಂದು ಹೇಳಲು ಸಾಧ್ಯವಿದೆ. ಆದರೆ ಕೇವಲ ರುಂಡು ಭಾಗವಿರುವ ಈ ಪ್ರತಿಮೆಯನ್ನು ಬೋರಲು ಮಾಡಿದ ಕೊಳಗೆರ ರೀತಿ ಇರುವ ಮರದಲ್ಲಿ ತಯಾರಿಸಲಾಗಿದೆ. ಇದರ ವಿಶೇಷವೆಂದರೆ, ಇದು ಗುಬ್ಬಿ ಹೊಸಳ್ಳಿ, ಸಂಸ್ಥಾನಕ್ಕೆ ಸೇರಿದ 33 ಹಳ್ಳಿಗಳ ನಾಡದೇವತೆ ಮೂರು ವರ್ಷಗಳಿಗೊಮ್ಮೆ ನಡೆಯುವ ಈ ಜಾತ್ರೆಯ ಧಾರ್ಮಿಕ ಕ್ರಿಯೆಗಳು ಮೊದಲ ಎರಡು ದಿನ ರಾತ್ರಿ ವೇಳೆ ನಡೆದರೆ ಮೂರನೇ ದಿನ ಹಗಲು ನಡೆಯುತ್ತದೆ. ಈ ಜಾತ್ರೆಯ ಆರ್ಕಷಣೆ ಭಿನ್ನಶೈಲಿಯಲ್ಲಿ ವಿವಿಧ ಹೂಗಳು ಹೊಂಬಾಳೆಯಿಂದ ಅಲಂಕೃತಗೊಂಡ ತಂಬಿಟ್ಟಿನ ಆರತಿ ಜೊತೆಗೆ ತೇರಿನಾಕೃತಿಯ ಎತ್ತಿನ ಬಂಡಿ ಕುರ್ಜುಗಳು. ಈ ಜಾತ್ರೆಯ ಮತ್ತೊಂದು ಬಹು ಮುಖ್ಯ ಆರ್ಕಷಣೆ ಸಂಸ್ಥಾನದ ಅರಸರನ್ನು ಕುದುರೆಯ ಮೇಲೆ ಮೆರವಣಿಗೆ ಮಾಡುತ್ತಾ ಬಾರೆಯಿಂದ ಪರಾಕು ಹೇಳುವ ಮೂಲಕ ಕರೆತರುವುದು. ಅಲ್ಲಿ

ಅರಸು ನೆರೆದಿದ್ದ ಭಕ್ತಸ್ತೋಮವನ್ನು ಉದ್ದೇಶಿಸಿ ಮಾತನಾಡುವುದು. ಒಟ್ಟಾರೆ ಈ ಜಾತ್ರೆ ಸಂಸ್ಥಾನದ ಸಂಸ್ಕೃತಿಯ ಪ್ರತಿಬಿಂಬ. ಇದನ್ನು ಸಂಸ್ಥಾನ ಆರಂಭವಾದಾಗಿನಿಂದಲೂ ಆಚರಿಸುವರು. ಇಂದು ಪ್ರಜಾಪ್ರಭುತ್ವ ಸರ್ಕಾರವಿದ್ದರೂ ಆ ಭಾಗದ ಜನತೆ ಅರಸು ಮನೆತನದವರನ್ನು ಈ ಜಾತ್ರೆಯ ಮೂಲಕ ಗೌರವಿಸಿ ಅವರನ್ನು ಇನ್ನೂ ಅರಸರಂತೆ ಕಾಣುವುದು ಸಂಪ್ರದಾಯಗಳ ಮುಂದುವರಿಕೆ ಎನ್ನಬಹುದು. ಒಟ್ಟಾರೆ ಇದೊಂದು ಅರಸು ಮನೆತನದವರನ್ನು ಗೌರವಿಸುವ ವಿಶಿಷ್ಠ ಜಾತ್ರೆ.

## ಗ್ರಂಥಋಣ

1. ಕಲ್ಪಶೋಧ–ಡಾ.ಡಿ.ಎನ್.ಯೋಗೀಶ್ವರಪ್ಪ 2012 ಪ್ರಗತಿ ಪ್ರಕಾಸನ.
2. ಟಿ.ಸಿ.ಹುಚ್ಚಪ್ಪ ಲಿಂಗಾಯತ ಧರ್ಮ–1990, ಎನ್,ಎಸ್,ಎಸ್, ಕಲ್ಯಾಣ ಕೇಂದ್ರ, ಬೆಂಗಳೂರು.
3. ಡಾ.ಎಂ.ಎಂ.ಕಲಬುರ್ಗಿ ಲಿಂಗಾಯತ ಸಿ.ಎಸ್.ವಿ.ಎಂ. ಶಿಕ್ಷಣ ಸಂಸ್ಥೆ, ಇಳಿಕಲ್.
4. ನೊಳಂಬರು–ಡಾ.ಎಂ.ಪಿ.ಶಂಕರಪ್ಪ–2005.
5. ಆಲದಕೊಂಬೆ ಅಮ್ಮ–ಹೆಚ್.ಕೆ.ನರಸಿಂಹಮೂರ್ತಿ–2010.
6. ಗುಬ್ಬಿ ಹೊಸಹಳ್ಳಿ ಕೈಪಿಯತ್ತುಗಳು.